<u>ಅಸಲು ದಾವಾ ಸಂಖ್ಯೆ **- 179/20**</u> ಡಿ.ಡಬ್ಲ್ಯೂ**:-2**

ದಿನಾಂಕಃ **28.01.2026** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :- ವಾದಿ ಪರ ವಕೀಲರಿಂದ :-</u>

**3** ನೇ ಪ್ರತಿವಾದಿ ನನ್ನ ಅಣ್ಣನಾಗಬೇಕು ಮತ್ತು ಐ. ಟಿ. ಐ ವಿದ್ಯಾಭ್ಯಾಸ ಮಾಡಿದ್ದಾನೆ. ನನ್ನ ತಂಗಿಯ ಹೆಸರು ಅಕ್ಷತಾಬಾಯಿ. ನನ್ನ ಜನ್ಮ ದಿಃ **09.10.2000.** ನನ್ನ ತಂಗಿ ಅಕ್ಷತಾಬಾಯಿ ಜನ್ಮ ದಿನಾಂಕ ಗೊತ್ತಿಲ್ಲ ಆದರೆ ನನ್ನಗಿಂತ **2** ವರ್ಷ ಚಿಕ್ಕವಳು. ದಿಃ **19.03.2018** ಕ್ಕೆ ನಾನು ಅಪ್ರಾಪ್ತ ವಯಸ್ಕನು ಎಂದರೆ ಸರಿ. ಪ್ರತಿವಾದಿ **1** ಮತ್ತು **2** ನನ್ನ ತಂದೆ ತಾಯಿಯರಿಗೆ ಸಹಿ ಮಾಡಲು ಬರುತ್ತದೆ. ಸಾಕ್ಷಿಗೆ ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ರೂ **10,000** ವನ್ನು ಯಾರು ಯಾರಿಗೆ ಕೊಟ್ಟರು ಮತ್ತು ಯಾವ ದಿನಾಂಕದಂದು ಕೊಟ್ಟಿದ್ದಾರೆ ಎಂದು ನಮೂದಾಗಿಲ್ಲ ಎಂದರೆ ಸರಿ. ಈಗೇ **9-10** ವರ್ಷಗಳ ಹಿಂದೆ ನನಗೆ **12-13** ವಯಸ್ಸಿನವನ್ನು ಇದ್ದಾಗ ವಾದಿಯಿಂದ ರೂ. **10,000/-** ಹಣವನ್ನು ಪಡೆದುಕೊಂಡು ಬಂದಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ವಾದಿಯಿಂದ ನಾನೇ ಹಣವನ್ನು ಪಡೆದುಕೊಂಡು ಬಂದಿದ್ದೇನೆ ಎಂದು ನಮೂದು ಮಾಡಿಲ್ಲ ಎಂದರೆ ಸರಿ.

ನಾನು ವಾದಿಯಿಂದ ರೂ **10,000/-** ಸಾಲದ ಹಣವನ್ನು ತೆಗೆದುಕೊಂಡು ಬರುವ ಸಮಯದಲ್ಲಿ ನಮ್ಮ ತಂದೆಯವರು ಯಾವುದೇ ದಾಖಲೆಯನ್ನು ಬರೆದುಕೊಟ್ಟಿರುವುದಿಲ್ಲ. ವಾದಿಯಿಂದ ರೂ. **10,000/-** ಹಣವನ್ನು ಕೈಗಳ ಸಾಲವಾಗಿ **1** ತಿಂಗಳ ಮಟ್ಟಿಗೆ ಪಡೆದುಕೊಂಡು ಬಂದಿರುತ್ತೇನೆ. ಸದರಿ ರೂ. **10,000/-** ಹಣವನ್ನು ವಾದಿಗೆ ವಾಪಾಸ್ಸು ಕೊಟ್ಟಿರುವುದಿಲ್ಲ. ವಾದಿಯು ಸರ್ವೆ ನಂ. **25/2** ರಲ್ಲಿ ಇರುವ **5** ಎಕರೆ **36** ಗುಂಟೆ ಜಮೀನಿಗೆ ಸಂಬಂಧಿಸಿದಂತೆ ವಾದಿಯನ್ನು ಸಲ್ಲಿಸಿರುತ್ತಾರೆ. ವಾದಿಯು ಸದರಿ ಮೇಲ್ಕಂಡ

ಜಮೀನಿನ **24** ಗುಂಟೆ ಜಮೀನಿಗೆ ಸಂಬಂಧಿಸಿದಂತೆ ದಾವೆಯನ್ನು ಸಲ್ಲಿಸಿರುತ್ತಾರೆ. ನಿಪಿ-**1** ದಾಖಲೆಯಲ್ಲಿ ಇರುವ ಪ್ರತಿವಾದಿ **1** ರಿಂದ **3** ರವರ ಛಾಯಾಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನಿಪಿ-**1** ದಾಖಲೆಯನ್ನು ಉಪನೋಂದಾಣಿ ಕಚೇರಿಯಲ್ಲಿ ನೋಂದಾಣಿ ಮಾಡುವ ಸಮಯದಲ್ಲಿ ನಾನು ಹಾಜರಿರಲಿಲ್ಲ ಮತ್ತು ಸದರಿ ದಿನದಂದು ಏನು ಏನು ವ್ಯವಹಾರವಾಗಿದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಪ್ರಸುತ್ತ ಸರ್ವೆ ನದ. **25/2** ರಲ್ಲಿ ಒಟ್ಟು ವಿಸ್ತೀರ್ಣ **3** ಎಕರೆ **37** ಗುಂಟೆ ಇರುತ್ತದೆ. ಉಳಿದ **1** ಎಕರೆ ಜಮೀನನ್ನು ನನ್ನ ತಂಗಿ ಅಕ್ಷತಾ ಬಾಯಿ ಭಾಗಂಶಕ್ಕೆ ಕೊಟ್ಟಿದ್ದು ಮತ್ತು ಅವರು ಬೇರೆಯವರಿಗೆ ಮಾರಾಟ ಮಾಡಿರುತ್ತಾರೆ ಮತ್ತು **2002** ನೇ ಸಾಲಿನಲ್ಲಿ **1** ನೇ ಪ್ರತಿವಾದಿ ನಮ್ಮ ಮಾವ ಜಯನಾಯ್ಕುರವರಿಗೆ **36** ಗುಂಟೆಯನ್ನು ಕೊಟ್ಟಿದ್ದಾರೆ. ಸದರಿ ಸರ್ವೆ ನಂ. **25/2** ರಲ್ಲಿ **1** ಎಕರೆ ಜಮೀನನ್ನು ನಿಮ್ಮ ತಂಗಿ ಅಕ್ಷತಾ ಬಾಯಿ ಮಾರಾಟ ಮಾಡಿಲ್ಲ **1** ನೇ ಪ್ರತಿವಾದಿಯೇ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ.

ಸರ್ವೆ ನಂ **25/2** ರಲ್ಲಿ **1** ಎಕರೆ ಜಮೀನನ್ನು **1** ನೇ ಪ್ರತಿವಾದಿ ಸುಮಬಾಯಿ ಎಂಬುವವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ **1** ಎಕರೆ ಜಮೀನು ನನ್ನ ತಂಗಿ ಅಕ್ಷತಾಬಾಯಿಗೆ ಸೇರಿದ ಹಿಸ್ಸೆ ಎಂದು ನುಡಿಯುತ್ತಾರೆ. **1** ನೇ ಪ್ರತಿವಾದಿ **36** ಗುಂಟೆ ಜಮೀನನ್ನು ಜಯನಾಯ್ಕುರವರಿಗೆ ಶುದ್ಧ ಕ್ರಯ ಪತ್ರದ ಆಧಾರದ ಮೇಲೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. **1** ನೇ ಪ್ರತಿವಾದಿ ನಿರ್ಮಾಲಬಾಯಿ ಕೋಂ ಗಿರೀಶ್ ನಾಯ್ಕುರವರಿಗೆ ಸರ್ವೆ ನಂ. **25/2** ರಲ್ಲಿ **2** ಗುಂಟೆ ಜಮೀನನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನಮ್ಮ ತಂದೆಯವರಿಗೆ ಕಷ್ಟ ಬಂದಾಗಲೆಲ್ಲ ಜಮೀನನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಪಿ-**1** ದಾಖಲೆ ನೋಂದಾಣಿಯಾಗುವ ಸಮಯದಲ್ಲಿ ನಾನು ಮತ್ತು ನನ್ನ ತಂಗಿ ಅಕ್ಷತಾ ಅಪ್ರಾಪ್ತ ವಯಸ್ಕರಾಗಿದ್ದರಿಂದ **1** ನೇ ಪ್ರತಿವಾದಿ ನಮ್ಮಗಳ ಸಹಿಯನ್ನು ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ

ಪತ್ರದಲ್ಲಿ ನಮೂದು ಮಾಡಿರುವ ರೂ **10,000/-** ಹಣದ ವ್ಯವಹಾರಕ್ಕೂ ಮತ್ತು ನಿಪಿ-**1** ದಾಖಲೆಯ ವ್ಯವಹಾರಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ವಾದಿ ಮತ್ತು **1** ನೇ ಪ್ರತಿವಾದಿ ಇಬ್ಬರೂ ಸ್ನೇಹಿತರಾಗಿದ್ದು ಮತ್ತು ನಿಪಿ-**1** ರ ಕ್ರಯದ ಕರಾರು ಪತ್ರದ ಆಧಾರದ ಮೇಲೆ ವಾದಿ ಮನೆಯನ್ನು ಕಟ್ಟಿಕೊಂಡು ವಾಸವಾಗಿದ್ದಾರೆ ಎಂದರೆ ಸರಿಯಲ್ಲ. ನ್ಯಾಯಾಲಯದಿಂದ ಒಬ್ಬ ಕಮಿಷನರ್ ನ್ನು ನೇಮಕಮಾಡಿ ವಾದಿಯು ದಾವಾ ಆಸ್ತಿಯಲ್ಲಿ ಮನೆಯನ್ನು ಕಟ್ಟಿಕೊಂಡು ವಾಸವಾಗಿದ್ದಾರೆ ಅಥವಾ ಇಲ್ಲ ಎಂಬ ಬಗ್ಗೆ ವರದಿ ಸಲ್ಲಿಸುವ ಬಗ್ಗೆ ನಮ್ಮಿಂದ ಯಾವುದೇ ತಕರಾರು ಇರುವುದಿಲ್ಲ. ದಾವಾ ಆಸ್ತಿಯಲ್ಲಿ ಮನೆ ಇರುವುದಿಲ್ಲ ದನದ ಕೊಟ್ಟಿಗೆ ಇರುತ್ತದೆ ಸದರಿ ದನದ ಕೊಟ್ಟಿಗೆ ವಾದಿಯು ಸಿಸಿಟಿವಿಯನ್ನು ಹಾಕಿಸಿದ್ದಾರೆ. ವಾದಿಗೆ ಸೇರಿದ **24** ಗುಂಟೆ ಜಮೀನನ್ನು ಲಾಪಟಾಯಿಸುವ ಉದ್ದೇಶದಿಂದ ಪ್ರತಿವಾದಿ **1** ರಿಂದ **3** ರವರ ಜೊತೆ ಸಾಮೀಲಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಿಪಿ-**1** ಕ್ರಯದ ಕರಾರು ಪತ್ರಕ್ಕೆ ಪ್ರತಿವಾದಿ **1** ರಿಂದ **3** ರವರು ಬಾಧ್ಯಸ್ಥರು ಎಂದರೆ ಸರಿಯಲ್ಲ.

ಮರು ವಿಚಾರಣೆ:- ಇಲ್ಲ

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.